**ಅಸಲು ದಾವಾ ಸಂಖ್ಯೆ:288/2019 ಪಿ.ಡಬ್ಲ್ಯೂ: 1**

**ಸಾಕ್ಷಿಯು ದಿನಾಂಕ 20.03.2023 ರಂದು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣವಚನ ನೀಡಲಾಯಿತು.**

**ಮುಖ್ಯ ವಿಚಾರಣೆ: ಶ್ರೀ. ಎಂ.ಬಿ.ಎನ್ ನ್ಯಾಯವಾದಿಗಳಿಂದ:**

ನಾನು ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಅದನ್ನು ನಾನೇ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸತ್ಯವಾಗಿವೆ, ಅದರಲ್ಲಿರುವ ಅಂಶಗಳನ್ನು ಅರ್ಥೈಸಿಕೊಂಡ ನಂತರ ನಾನು ಅದಕ್ಕೆ ಸಹಿ ಮಾಡಿರುತ್ತೇನೆ.

ದಿ: 02.01.2023 ರಂದು ವಾದಿಯು ಬರೆದುಕೊಟ್ಟ ಜಿಪಿಎ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ದಾವಾ ಆಸ್ತಿ ಸಂಖೆ 1 ಮತ್ತು 2 ಕ್ಕೆ ಸಂಬಂಧಿಸಿದಂತೆ 2 ದೃಡೀಕೃತ ಅಸೆಸ್ಮೆಂಟ್ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ-2 ಮತ್ತು 3 ಎಂದು ಗುರುತಿಸಲಾಯಿತು. ದಾವಾ ಸಂಖ್ಯೆ 3 ರಿಂದ 14 ಕ್ಕೆ ಸಂಬಂಧಿಸಿದಂತೆ ಒಟ್ಟು 33 ಕೈಬರಣಿಗೆ ಮತ್ತು ಗಣಕೀಕೃತ ಪಹಣಿ ಪತ್ರಿಕೆ ಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ-4 ರಿಂದ 36 ಎಂದು ಗುರುತಿಸಲಾಯಿತು. ದಿ: 30.10.2019 ರ ನೋಟೀಸಿನ ಕಛೇರಿ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-37 ಎಂದು ಗುರುತಿಸಲಾಯಿತು. ಒಟ್ಟ 13 ಅಂಚೆ ರಿಶೀದಿಗಳು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ-38 ರಿಂದ 50 ಎಂದು ಗುರುತಿಸಲಾಯಿತು. ಒಟ್ಟು 7 ಅಂಚೆ ಸ್ವೀಕೃತಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ-51 ರಿಂದ 57 ಎಂದು ಗುರುತಿಸಲಾಯಿತು. ವಾಪಸ್ಸಾಗಿರುವ ಒಟ್ಟು 4 ಆರ್.ಪಿ.ಎ.ಡಿ ಕವರಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ-58 ರಿಂದ 61 ಎಂದು ಗುರುತಿಸಲಾಯಿತು. ಅವುಗಳ ಒಳಗೆ ಇರುವ ನೋಟೀಸನ್ನು ತೆಗೆದು ಕ್ರಮವಾಗಿ ನಿಪಿ-58(ಎ), 59(ಎ), 60(ಎ) ಮತ್ತು 61(ಎ) ಎಂದು ಗುರುತಿಸಲಾಯಿತು.

ಪಾಟಿ ಸವಾಲು: ಪಾಟಿ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

**ಸಾ . ಹೇ . ಬಿ. ಮಾಡಿಸಲಾಯಿತು.**
**ಓ.ಹೇ.ಕೇ.ಸ.ಇದೆ**

**ಅಪರ ಸಿವಿಲ್ ನ್ಯಾಯಾಧೀಶರು**
**ನಾಗಮಂಗಲ**